

ಬರುಬರುತ್ತಾ ಅಜ್ಜಿ, ಹುಡುಗ ಸಾತ್ವಿಕನನ್ನು ಬಹಳ ಹಚ್ಚಿಕೊಂಡು ಬಿಟ್ಟಿತ್ತು. ಆ ಸಾತ್ವಿಕನೂ ಅಷ್ಟೇ, ಸಂಜೆ ಸ್ಕೂಲ್ ವ್ಯಾನಿಂದ ಇಳಿದವನೇ ಟೆರೆಸ್ ಮೇಲಿನ ರೂಮಿನ ಬಳಿ ಬ್ಯಾಗು ಎಸೆದು ಅಜ್ಜಿಯ ಬಳಿ ಓಡಿಬಿಡುತ್ತಿದ್ದ.

ದಾಕ್ಷಾಯಿಣಿ ಮಗನಿಗೆಂದು ಫ್ರಿಜ್ಜಿನಲ್ಲಿ ಫಿಜ್ಜಾ, ಬರ್ಗರ್ ಇರಿಸಿರುತ್ತಿದ್ದಳು. ಸಣ್ಣಜ್ಜಿ ಬೆಳಗ್ಗೆ ಮಾಡಿದ ರೊಟ್ಟಿಯೋ, ದೋಸೆಯೋ, ಇರಿಸಿಕೊಂಡು ಕಾಯುತ್ತಿರುತ್ತಿದ್ದಳು. ಅದು ಯಾವುದೂ ಅವನಿಗೆ ಬೇಕೆನಿಸುತ್ತಿರಲಿಲ್ಲ. ಬಂದು ಪುಟ್ಟಮ್ಮಜ್ಜಿಯ ಮುಂದೆ ಕುಳಿತು ಬಿಡುತ್ತಿದ್ದ.

ಅಜ್ಜಿ ಮೆಲ್ಲಗೆ ರವಿಕೆಯ ಕೋರೆಜೋಬಿಗೆ ಕೈಹಾಕಿ ಒಂದು ತುಂಡು ತೆಂಗಿನ ಕಾಯಿ ಹೋಳು, ಜೊತೆಗೆ ಹೆಬ್ಬೆಟ್ಟು ಗಾತ್ರದ ಬೆಲ್ಲ ತೆಗೆದುಕೊಡುತ್ತಿತ್ತು. ಹುಡುಗ ಅದನ್ನು ತೆಗೆದುಕೊಂಡು ಅದಕ್ಕೆ ಅಂಟಿರುತ್ತಿದ್ದ ನಶ್ಯ ಒರೆಸಿ ಬಹಳ ಖುಷಿಯಿಂದ ತಿನ್ನುತ್ತಿದ್ದ...

* * *

ಇತ್ತೀಚೆಗೆ ಎಂಥೆಂಥವರೋ, ಅದರಲ್ಲೂ ಪ್ರಾಥಮಿಕ ಶಾಲಾ ಟೀಚರ್‌ಗಳೂ ಸಹಾ ಕವಿ ಥರಾ ಲೇಖನ ಬರೆಯುತ್ತಾ ಸಾಹಿತಿಗಳೆಂದು ವೇದಿಕೆಯೇರಿ ಮಿಂಚುತ್ತಿರುವುದನ್ನು ಕಂಡಾಗ ಕನ್ನಡದಲ್ಲಿ ಎಂ.ಎ ಮಾಡಿರುವ ತಾನೇಕೆ ಬಿಡಬೇಕು ಎಂಬ ವಿಚಾರ ಹುಚ್ಚೇಗೌಡನ ಮನಸ್ಸಿನಲ್ಲಿ ಕೊರೆಯತೊಡಗಿತ್ತು. ಅದರಲ್ಲೂ ತಾನು ಅಸಡ್ಡೆ ಮಾಡುತ್ತಿದ್ದ, ಪ್ರೈಮರಿ ಶಾಲೆಯ ಮೇಷ್ಟ್ರ ಕೆಲಸ ಮಾಡಿ ರಿಟೈರಾಗಿರುವ, ತನ್ನ ಮಾಧ್ಯಮಿಕ ಶಾಲೆಯ ಸಹಪಾಠಿ ಸತೀಶ ಸಾಹಿತಿಯಾಗಿ ಗಳಿಸುತ್ತಿದ್ದ ಗೌರವ ಹುಚ್ಚೇಗೌಡನಲ್ಲಿ ಒಂದು ಬಗೆಯ ಇರುಸುಮುರುಸು ಉಂಟು ಮಾಡುತ್ತಿತ್ತು.

ಪ್ರೈಮರಿ ಶಾಲೆಯ ಮೇಷ್ಟ್ರಾಗಿದ್ದರೂ ಕಾಲಕಾಲಕ್ಕೆ ಪ್ರಕಟವಾಗುವ ಸಾಹಿತ್ಯದ ಪುಸ್ತಕಗಳನ್ನು ಸಂಗ್ರಹಿಸಿಟ್ಟುಕೊಂಡು ಓದಿ ಅಪಾರ ಜ್ಞಾನ ಸಂಪಾದಿಸಿದ್ದ ಅವನು ಸುಮಾರು ನಾಲ್ಕು ದಶಕಗಳಿಂದ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತ ಬಂದಿದ್ದ. ಹೊಸಳ್ಳಿ ಸತೀಶ ಎಂಬ ಹೆಸರಿನಲ್ಲಿ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದ ಅವನಿಗೆ ಸಾಹಿತಿಯಾಗಿ ಒಳ್ಳೆಯ ಹೆಸರಿತ್ತು. ಜಿಲ್ಲೆಯಲ್ಲಿ ಪ್ರಮುಖ ಸ್ಥಾನ ಪಡೆದಿದ್ದ ಅವನನ್ನು ಹೊರಗಿನಿಂದ ಬಂದ ಸಾಹಿತಿಗಳೂ ಸಹ ಭೇಟಿ ಮಾಡಿ ಅವನೊಂದಿಗೆ ಫೋಟೊ ಹೊಡೆಸಿಕೊಳ್ಳುವುದೂ ಇತ್ತು.

ಜಿಲ್ಲೆಯ ಇನ್ನೊಬ್ಬ ಪ್ರಮುಖ ಸಾಹಿತಿ, ತನ್ನ ದೊಡ್ಡ ಗಂಟಲಿನಿಂದಲೇ ಸಾಹಿತ್ಯ ಪರಿಷತ್ತಾಗಲೀ, ಅಕಾಡೆಮಿಯಾಗಲೀ, ಸಂಘ– ಸಂಸ್ಥೆಗಳಾಗಲೀ ಅಲ್ಲೆಲ್ಲಾ ಪ್ರಮುಖ ಸ್ಥಾನ ಗಿಟ್ಟಿಸಿಕೊಳ್ಳುವ ಖ್ಯಾತಿಯಿದ್ದ 'ದೊಡ್ಡಗಂಟಲ ರುದ್ರೇಗೌಡ' ಎಂದು ಜನ ಗುಟ್ಟಾಗಿ ಕರೆಯುವ ರುದ್ರೇಗೌಡ, ಖುದ್ದು ಹೊಸಳ್ಳಿ ಸತೀಶನ ಮನೆಗೇ ಬಂದು ಕರೆದುಕೊಂಡು ಹೋಗಿ ಪಾರ್ಟಿ ಕೊಡಿಸುತ್ತಿದ್ದುದು ಹುಚ್ಚೇಗೌಡನಿಗೆ ತಿಳಿದಿತ್ತು.

ಜಿಲ್ಲೆಯ ಪ್ರಸಿದ್ಧ ಪ್ರತಿಕೆಯಾದ 'ಮಲೆಯಾದ್ರಿಯ ಕೂಗು' ಸಂಪಾದಕರಾದ ಶ್ರೀನಿವಾಸ ಮೂರ್ತಿಯವರು ಸಹಾ ಖುದ್ದಾಗಿ ಸತೀಶನ ಮನೆಗೆ ಗೌರವದ ಭೇಟಿ ನೀಡಿ ತಮ್ಮ ಪತ್ರಿಕೆಗೆ ಬರೆಯುತ್ತಿರಿ ಎಂದು ಕೇಳಿಕೊಳ್ಳುವುದೂ ಇತ್ತು. ಹಾಗಾಗಿ ರಾಜ್ಯಮಟ್ಟದ ನಿಯತಕಾಲಿತದಲ್ಲಷ್ಟೇ ಅಲ್ಲದೆ 'ಮಲೆಯಾದ್ರಿಯ ಕೂಗು' ಪತ್ರಿಕೆಯಲ್ಲಿ ಅವನ ಬರಹಗಳು ಆಗಾಗ ಪ್ರಕಟವಾಗುತ್ತಿದ್ದವು.

ಸುಮಾರು ಅರ್ಧ ಶತಮಾನದಿಂದ ಪ್ರಕಟವಾಗುತ್ತಿರುವ 'ಮಲೆಯಾದ್ರಿಯ ಕೂಗು' ಸ್ಥಳೀಯ ರೈತರು, ಬಡವರ ಕೂಗೇ ಆಗಿತ್ತು. ರೈತ ಸಂಘದ್ದೇ ಆಗಲಿ, ದಲಿತ ಸಂಘದ್ದೇ ಅಗಲೀ ಪರಿಸರದ್ದೇ ಆಗಲಿ ಯಾವುದೇ ಚಳವಳಿ ಎಂದರೂ ಹಿಂದೆಲ್ಲಾ ಇದೇ ಶ್ರೀನಿವಾಸ ಮೂರ್ತಿಯವರು ಮುಂದೆ ನಿಂತಿರುತ್ತಿದ್ದರು. ಸರ್ಕಾರಿ ಅಧಿಕಾರಿಯಾಗಿರುವ ಅವರ ಮಗ ಸಂಸಾರ ಸಮೇತ ಬೆಂಗಳೂರಿನಲ್ಲೇ ನೆಲೆಸಿರುವುದರಿಂದ ಊರಿನ ತೋಟದ ನಿರ್ವಹಣೆ ಕೂಡಾ ಶ್ರೀನಿವಾಸ ಮೂರ್ತಿಯವರದೇ ಆಗಿತ್ತು. ಹಾಗಾಗಿ ತೋಟ-ಬೆಂಗಳೂರು ಎಂದು ಓಡಾಡಿಕೊಂಡಿರುವ ಅವರು ಇತ್ತೀಚೆಗೆ ಪತ್ರಿಕೆಯ ಕಡೆ ಗಮನ ಕೊಡುವುದು ಕಡಿಮೆ ಮಾಡಿದ್ದಾರೆ.

ಮೊದಲಿನಿಂದಲೂ ಅವರ ಪತ್ರಿಕೆಯಲ್ಲೇ